ದಿನಾಂಕ 07-03-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ ವೈ.ವಿ.ಹೆಚ್ ವಕೀಲರಿಂದ**

1) ನನಗೆ ನನ್ನ ಮೇಲಾಧಿಕಾರಿಗಳು ಚಾ.ಸಾ.21 ಇವರ ಮುಂದೆ ವರದಿ ಮಾಡಿಕೊಳ್ಳಲು ಲಿಖಿತವಾಗಿ ತಿಳಿಸಿದ್ದರು. ಆ ಆದೇಶವನ್ನು ದಿನಾಂಕ 16-03-2018 ರಂದು ನೀಡಿದ್ದರು. ಆ ಆದೇಶವನ್ನು ನಾನು ಚಾ.ಸಾ.21 ಇವರ ಮುಂದೆ ಹಾಜರುಪಡಿಸಿದ್ದೆ. ಆ ಆದೇಶದ ಪ್ರಕಾರ ತಾರೀಕು 17-03-2018 ರಂದು ಬೆಳಿಗ್ಗೆ 7.30 ಗಂಟೆಗೆ ಎ.ಸಿ.ಬಿ ಕಚೇರಿಗೆ ವರದಿ ಮಾಡಿಕೊಳ್ಳಲು ತಿಳಿಸಿದ್ದರು. ತಾರೀಕು 16-03-2018 ರಂದು ನಾನು ಎ.ಸಿ.ಬಿ ಕಚೇರಿಗೆ ಹೋಗಿದ್ದೆ. ಚಾ.ಸಾ.1 ಇವರು ನನಗೆ ಮೊದಲ ಬಾರಿ ಪರಿಚಯವಾದದ್ದು ತಾರೀಕು 17-03-2018 ರಂದು. ತಾರೀಕು 16-03-2018 ರಂದು ನನಗೆ ಚಾ.ಸಾ.1 ಸಿಕ್ಕಿರಲಿಲ್ಲ.

2) ಚಾ.ಸಾ.1 ಶೂ ಮತ್ತು ಸಾಕ್ಸ ಗಳ ಖರೀದಿ ಮಾಡುವುದಕ್ಕೆ ಡೀಲು ಕೊಟ್ಟಿದ್ದರು ಎಂದು ತಿಳಿಯಿತು. ಸದ್ರಿ ಶೂ ಮತ್ತು ಸಾಕ್ಸ್ ಗಳ ಡೀಲು 2017 ರ ಜೂನ್ ತಿಂಗಳಿನಲ್ಲಿ ಕೊಟ್ಟಿದ್ದರು ಎಂದು ತಿಳಿಯಿತು. ಚಾ.ಸಾ.1 ಇವರಿಗೆ ಜೂನ್ 2017 ರ ಸಮಯದಲ್ಲಿ ಸಂಪೂರ್ಣ ಹಣ ಸಂದಾಯವಾಗಿತ್ತು ಎಂದರೆ ನಿಜ. ನಾನು ದೂರಿಗಾಗಿ ಹೋದ ಸಮಯದಲ್ಲಿ ಚಾ.ಸಾ.1 ಇವರ ಯಾವುದೇ

ಕೆಲಸ ಬಾಕಿ ಇರಲಿಲ್ಲ. ನನ್ನ ತನಿಖೆ ಸಮಯದಲ್ಲಿ ಶಾಲಾ ಆಡಳಿತ ಮಂಡಳಿಯವರು ತಮ್ಮ ನಿರ್ಣಯದ ಮೂಲಕ ಶಾಲೆಗೆ ಶೂ ಮತ್ತು ಸಾಕ್ಸ್ ಸರಬರಾಜು ಮಾಡುವುದನ್ನು ನಿರ್ಧರಿಸುತ್ತಾರೆ ಎಂದರೆ, ಆ ಬಗ್ಗೆ ಮಾಹಿತಿ ಇಲ್ಲ.

3) ನನಗೆ ತೋರಿಸಿದ ನಿ.ಪಿ 40 ರ ಪುಟ ಸಂಖ್ಯೆ 103 ರಲ್ಲಿ ತಾರೀಕು 08-07-2017 ರ ನಿರ್ಣಯದಂತೆ ಫಿರ್ಯಾದುದಾರರಿಗೆ ಶೂ ಮತ್ತು ಸಾಕ್ಸ್ ಗಳ ಖರೀದಿಗೆ ನಿರ್ಣಯಿಸಿದ್ದರು ಎಂದರೆ ಇರಬಹುದು ಸದ್ರಿ ಭಾಗವನ್ನು ನಿ.ಪಿ 40(ಎ) ಎಂದು ಗುರುತಿಸಲಾಯಿತು. ನಾನು ಕೇಳಿದ ಸಂಭಾಷಣೆ ಎಷ್ಟು ಸಮಯದ್ದೆಂದು ಈಗ ನನಗೆ ಗೊತ್ತಿಲ್ಲ. ಆ ಸಂಭಾಷಣೆ ತಾರೀಕು 15-03-2018 ರದ್ದಾಗಿತ್ತು. ಆ ಸಂಭಾಷಣೆ ಇದ್ದ ಮೊಬೈಲ್‌ನ್ನು ಜಪ್ತು ಮಾಡಿದ್ದ ಬಗ್ಗೆ ಗೊತ್ತಿಲ್ಲ. ನಂತರ ಕೇಳಿಸಿದ್ದರು. ಆ ಸಂಭಾಷಣೆಯಲ್ಲಿ ಆರೋಪಿ ರೂ.20,000/- ಗಳ ಹಣ ಬೇಡಿಕೆ ಇಟ್ಟಿದ್ದು ಇರಲಿಲ್ಲ. ನಿ.ಪಿ 20 ಚಾ.ಸಾ. 2 ಇವರ ಕೈಬರಹದಲ್ಲಿತ್ತು.

4) ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ತಾರೀಕು 17-03-2018 ರಂತೆ ಯಾವುದೇ ಪ್ರಕ್ರಿಯೆಗಳನ್ನು ನನ್ನ ಮುಂದೆ ಲೋಕಾಯುಕ್ತ ಪೊಲೀಸರು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ತೋರಿಸಿದ ನಿ.ಪಿ 3 ರಿಂದ ನಿ.ಪಿ 17 ರವರೆಗಿನ ಪೋಟೋಗಳನ್ನು ತೆಗೆದಿದ್ದ ಕ್ಯಾಮೆರಾ ಸಾದಾ ಇತ್ತು ಅಥವಾ ಡಿಜಿಟಲ್ ಇತ್ತು ಎಂದು ಈಗ ನೆನಪಿಲ್ಲ. ಸದ್ರಿ ಪೋಟೋಗಳಲ್ಲಿ

ಅವುಗಳನ್ನು ತೆಗೆದಿದ್ದ ದಿನಾಂಕ ಕಂಡುಬರುತ್ತಿಲ್ಲ ಎಂದರೆ ನಿಜ. ನಿ.ಪಿ 3 ರಿಂದ 17 ರ ಪೋಟೋಗಳನ್ನು ಚಾ.ಸಾ.21 ತನಿಖೆಗೆ ಅನುಕೂಲವಾಗುವಂತೆ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಾನು, ಚಾ.ಸಾ.2, ತನಿಖಾಧಿಕಾರಿ ಮತ್ತು ಫಿರ್ಯಾದುದಾರ ಸೇರಿ ನಿ.ಪಿ 2ರ ಪಂಚನಾಮೆಯನ್ನು ತನಿಖೆಗೆ ಅನುಕೂಲವಾಗುವಂತೆ ಬರೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ಚಾ.ಸಾ.2 ಚಾ.ಸಾ.21 ಇವರ ಕಚೇರಿಯಲ್ಲಿ ರೆಡಿ ಇದ್ದ ಪಂಚನಾಮೆಗೆ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ.

5) ನಾನು ಆ ದಿನ ಆರೋಪಿಯ ಶಾಲೆಗೆ ಹೋಗುತ್ತಿದ್ದಾಗ ಸಮಯ ಸುಮಾರು 11.00 ಗಂಟೆ. ನಮ್ಮ ವಾಹನವನ್ನು ತನಿಖಾಧಿಕಾರಿ ಆರೋಪಿಯ ಶಾಲೆಯಿಂದ ಸುಮಾರು 100 ಮೀಟರಗಳ ಅಂತರದಲ್ಲಿ ನಿಲ್ಲಿಸಿದ್ದರು. ನಾವು ಇದ್ದ ಜಾಗೆಯಿಂದ ಆರೋಪಿಯ ಕಚೇರಿ ಕಾಣುವುದಿಲ್ಲ, ಆದರೆ ವಾಟರ್ ಟ್ಯಾಂಕ್ ಇದ್ದ ಜಾಗ ಕಾಣುತ್ತಿತ್ತು. ವಾಟರ್ ಟ್ಯಾಂಕ್ ನಿಂದ ಆರೋಪಿಯ ಕೋಣೆ ಸುಮಾರು 15 ಅಡಿಗಳ ಅಂತರ. ಆರೋಪಿಯ ಕಚೇರಿ ಬಾಗಿಲು ಹಾಕಿತ್ತು ಎಂದರೆ ಸರಿಯಲ್ಲ. ವಾಟರ್ ಟ್ಯಾಂಕಿನ ಬಳಿಯಲ್ಲಿ ನಿಂತರೆ ಆರೋಪಿಯ ಕಚೇರಿಯ ಒಳಗೆ ಏನು ಆಗುತ್ತಿದೆ ಎಂದು ಕಾಣುವುದಿಲ್ಲ ಮತ್ತು ಕೇಳಿಸುವುದಿಲ್ಲ ಎಂದರೆ ಸರಿಯಲ್ಲ. ಪ್ರಥಮತಃ ಫಿರ್ಯಾದಿ ಆರೋಪಿಯ ಕಚೇರಿಯ ಹೊರಗೆ ಬಂದು ಸನ್ನೆ ಮಾಡಿದ್ದರು. ಆ ರೀತಿ ಅವರು ಸನ್ನೆ ಮಾಡಿದ್ದು

ಅವರು ಆರೋಪಿಯ ಕಚೇರಿಯ ಒಳಗೆ ಹೋದ ಎರಡು ನಿಮಿಷದ ನಂತರ. ಆ ದಿನ ಫಿರ್ಯಾದಿ ಕಚೇರಿಯ ಒಳಗೆ ಹೋಗುವಾಗ ಆರೋಪಿ ಒಬ್ಬರೆ ಇದ್ದರು. ಆ ದಿನ ಫಿರ್ಯಾದಿ ಮತ್ತು ಆರೋಪಿತರ ನಡುವೆ ಸಂಭಾಷಣೆ ಕಚೇರಿಯ ಒಳಗಡೆ ಆಗಿತ್ತು. ಆ ದಿನ ಫಿರ್ಯಾದಿ ಆರೋಪಿಯ ಕಚೇರಿಯ ಒಳಗೆ ಹೋಗಿ ಬಂದಾಗಿನ ಸಂಭಾಷಣೆ ಎರಡು ನಿಮಿಷಗಿಂತ ಕಡಿಮೆ ಅವಧಿಯ ಸಂಭಾಷಣೆ ಎಂದರೆ ಇರಬಹುದು.

6) ಆದಿನ ತನಿಖಾಧಿಕಾರಿ ಆರೋಪಿಯನ್ನು ವಿಚಾರಿಸಿದಾಗ, ಆರೋಪಿ ಫಿರ್ಯಾದಿ ಇಂದ ಪಡೆದ ಹಣವನ್ನು ಶಾಲೆಯ ಅಭಿವೃದ್ದಿಗಾಗಿ ಪಡೆದ ಹಣ ಎಂದರೆ ನಿಜ ಎಂದು ಹೇಳಿದ್ದರು. ಅದಕ್ಕಾಗಿ ಆರೋಪಿ ನಿ.ಪಿ 22 ರಂತೆ ಹಿಂಬರಹವನ್ನು ಸಹ ತನಿಖಾಧಿಕಾರಿ ಕೇಳಿದಾಗ ಬರೆದುಕೊಟ್ಟಿದ್ದರು ಎಂದರೆ ನಿಜ. ಆ ದಿನ ಆರೋಪಿ ಫಿರ್ಯಾದಿ ಇಂದ ಯಾವುದೇ ಲಂಚದ ಹಣವನ್ನು ಕೇಳಿಲ್ಲ ಮತ್ತು ಪಡೆದಿಲ್ಲ ಎಂದರೆ ಸರಿ ಅಲ್ಲ. ಆ ದಿನ ಫಿರ್ಯಾದುದಾರ ಸರಬರಾಜು ಮಾಡಿದ ಶೂ ಮತ್ತು ಸಾಕ್ಸಗಳು ಕಳಪೆ ಗುಣಮಟ್ಟದಾಗಿದ್ದು ಅದಕ್ಕಾಗಿ ಫಿರ್ಯಾದಿಗೆ ಅನಂತರ ಸರಬರಾಜು ಆದೇಶ ಕೊಡಲು ಆಗುವುದಿಲ್ಲ ಎಂದು ಫಿರ್ಯಾದಿ ಹೇಳಿದ್ದು ಸಹ ಆ ದಿನ ನಮಗೆ ಕಂಡು ಬಂದಿತ್ತು ಎಂದರೆ ಸರಿಯಲ್ಲ. ಆ ದಿನ ನನ್ನ ಮುಂದೆ ನಿ.ಪಿ 18 ರಲ್ಲಿ ಹೇಳಿದ ಯಾವುದೇ ಪ್ರಕ್ರಿಯೆಗಳನ್ನು ಮಾಡದೇ ನನ್ನನ್ನು ತನಿಖೆಗೆ ಅನುಕೂಲವಾಗುವಂತೆ

ಚಾ.ಸಾ.21, ನಾನು ಮತ್ತು ಚಾ.ಸಾ.1 ಮತ್ತು ಚಾ.ಸಾ.2 ಇವರೊಂದಿಗೆ ಸೇರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ 19 ರ ಪೋಟೋಗಳನ್ನು ನಿ.ಪಿ 18 ಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

7) ನಂತರ ತಾರೀಕು 24-03-2018 ರಂದು ನನ್ನ ಸಮಕ್ಷಮ ಆರೋಪಿಯ ಧ್ವನಿಯ ಮಾದರಿಗಳನ್ನು ನಿ.ಪಿ 24 ರಂತೆ ಪಡೆದಿಲ್ಲ ಎಂದರೆ ಸರಿಯಲ್ಲ. ನಿ.ಪಿ 2 ರ ಸಮಯದಲ್ಲಿ, ನಿ.ಪಿ 18 ರ ಸಮಯದಲ್ಲಾಗಲೀ, ನಿ.ಪಿ 24 ರ ಸಮಯದಲ್ಲಾಗಲಿ ಇರುವ ಧ್ವನಿ ಆರೋಪಿತನಿಗೆ ಸಂಬಂಧಪಟ್ಟ ಧ್ವನಿಯಲ್ಲ ಎಂದರೆ ಸರಿಯಲ್ಲ. ನಾನು ಎ.ಸಿ.ಬಿ ತನಿಖಾಧಿಕಾರಿಗಳ ಪ್ರಭಾವಕ್ಕೊಳಗಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಫಿರ್ಯಾದುದಾರರಿಂದ ಯಾವುದೇ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿಲ್ಲ ಎಂದರೆ ಸರಿಯಲ್ಲ ಮತ್ತು ಆ ಬೇಡಿಕೆಯಿಂದ ಯಾವುದೇ ಲಂಚದ ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು